ಅಸಲು ದಾವಾ ನಂಃ **70/2021**
ಪಿ.ಡಬ್ಲ್ಯೂಃ **1,**

**ದಿನಾಂಕ :25-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**

**ಪಾಟಿ ಸವಾಲು :- ಶ್ರೀ ಬಿ.ಎನ್. ಎಸ್. 1 ನೇ ಪ್ರತಿವಾದಿ ಪರ ವಕೀಲರಿಂದ :**

ನಾನು ವಾದಿಯ ಬ್ಯಾಂಕ ಮ್ಯಾನೇಜರ ಅಂತಾ 26-05-2022 ರಂದು ಪ್ರಭಾರ ಹೊಂದಿದ್ದೇನೆ. ನಾನು ವಾದಿ ಮುಖ್ಯ ಕಛೇರಿಯಿಂದ ಅಧಿಕಾರ ಪತ್ರ ಹೊಂದಿ ಸಾಕ್ಷಿ ನುಡಿಯತ್ತಿದ್ದೇನೆ ನಾನು ವಾದಿ ಮುಖ್ಯ ಕಛೇರಿಯಿಂದ ಸಾಕ್ಷಿ ನುಡಿಯುಲು ಅಧಿಕಾರ ಪತ್ರವನ್ನು ಹಾಜರು ಪಡಿಸಿಲ್ಲಾ ಬೇಕಾದರೆ ಹಾಜರು ಪಡಿಸುತ್ತೇನೆ. 1 ನೇ ಪ್ರತಿವಾದಿಯ ಸಾಲದ ಅರ್ಜಿಯನ್ನು ನಾನು ಪರಿಶೀಲಿಸಿರುತ್ತೇನೆ. ಯಾವುದೇ ಒಬ್ಬ ವ್ಯಕಿ ಸಾಲ ಪಡೆಯುವಾಗ ಸಲ್ಲಿಸಿದ ಅರ್ಜಿಯನ್ನು ನಮ್ಮ ಬ್ಯಾಂಕಿನಲ್ಲಿ ಪರಿಶೀಲಿಸಲಾಗುತ್ತೆ ಎಂದರೆ ಸರಿ. ಸದರಿ ಅರ್ಜಿ ಕುರಿತಾಗಿ ನಾನು ಕಾನೂನಿನ ಸಲಹೆ ಪಡೆಯುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿ ಕಾನೂನಿನ ಸಲಹೆ ಪಡೆಯುವ ಅವಶ್ಯಕತೆ ಇರಲಿಲ್ಲಾ ಕಾರಣ ಹೈಪೋಥೀಕೇಶನ ಸಾಲ ಆಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಸಾಲದ ಅರ್ಜಿಯ ಸಲ್ಲಿಸಿದಾಗ ಅದನ್ನು ಸಂಬಂಧಪಟ್ಟ ಅಧಿಕಾರಿ ಅದನ್ನು ಪರಶೀಲಿಸಿ ಅವರ ಸಹಿ ಮತ್ತು ಬ್ಯಾಂಕಿನ ಮೊಹರು ಹಾಕುತ್ತಾರೆ ಎಂದರೆ ಸರಿ. ಯಾವುದೇ ಒಬ್ಬ ವ್ಯಕ್ತಿ ಸಾಲದ ಅರ್ಜಿ ಸಲ್ಲಿಸಿದಾಗ ಸಾಲ ಮಂಜೂರಾತಿ ಆಗಲು 15-30 ದಿನಗಳು ಬೇಕಾಗುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ಸಾಲದ ಅರ್ಜಿ ಸಲ್ಲಿಸಿದಾಗ ಅದನ್ಉ ಪರಿಶೀಲಿಸಲು ಕನಿಷ್ಟ 15-30 ದಿನಗಳು ಬೇಕಾಗುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ಸಾಲದ ಅರ್ಜಿಯ ಮೇಲೆ ನಮ್ಮ ಬ್ಯಾಂಕಿನ ಮ್ಯಾನೇಜರ್, ಫೀಲ್ಡ್ ಮಾನ್ಯೇಜನ ಇವರ ಸಹಿ ಮತ್ತು ಮೊಹರು ಹಾಕಬೇಕಾಗುತ್ತದೆ ಎಂದರೆ ಸಾಕ್ಷಿ ಕೆಲವೊಂದು ಸಲ್ ಮೊಹರ ಅವಶ್ಯಕತೆ ಇಲ್ಲಾ ಎಂದು ನುಡಿಯತ್ತಾರೆ. 1 ನೇ ಪ್ರತಿವಾದಿಗೆ ಸಾಲ ಅರ್ಜಿಯನ್ನು ಪರೀಶೀಲಿಸಿ ಸಾಲ ಮಂಜೂರಾತಿ ಆತನನ್ನು ಕರೆಯಿಸಿ ತಿಳಿಸುತ್ತೇವೆ. 1 ನೇ ಪ್ರತಿವಾದಿ ಸಾಲ ಪಡೆಯಲು ಕೋಟೇಶನ ಸಲ್ಲಿಸಿರುತ್ತಾರೆ ಮತ್ತು ಆತನಿಂದ ಕೆಲವೊಂದು ದಾಖಲೆಗಳನ್ನು ಪಡೆದಿರುತ್ತೇವೆ. ದಾಖಲೆಗಳನನ್ನು ಪರಿಶೀಲಿಸಿದ ನಂತರ ಸದರಿ ವ್ಯಕ್ತಿಯನ್ನು ಬ್ಯಾಂಕಿಗೆ ಕರೆಯಿಸಿ ಆತನಿಂದ ದಾಖಲೆಗಳ ಮೇಲೆ ಸಹಿ ಪಡೆದು ಅದೇ ದಿನ ಸಾಲ ಮಂಜೂರು ಮಾಡಿ ಆತನ ಬ್ಯಾಂಕ ಖಾತೆಗೆ ಜಮಾ ಮಾಡುತ್ತೇವೆ.

1 ನೇ ಪ್ರತಿವಾದಿಗೆ ದಿನಾಂಕ: 18-11-2015 ರಂದು ಸಾಲ ಮಂಜೂರಾತಿ ಆಗಿದೆ. 1 ನೇ ಪ್ರತಿವಾದಿಯಿಂದ ಕೋಟೆಶನ ಮಾತ್ರ ಪಡೆದಿರುತ್ತೇವೆ. ನಿಪಿ-1 ರಿಂದ 6 ಅರ್ಜಿ ಫಾರಂ ನಮ್ಮ ಮುಖ್ಯ ಕಛೇರಿ ಬಳ್ಳಾರಿಯಿಂದ ಎಲ್ಲಾ ಶಾಖೆಗಳಿಗ ಸರಬರಾಜು ಆಗುತ್ತವೆ ಎಂದರೆ ಸರಿ. ಸರಬರಾಜು ಆದಂತಹ ಅರ್ಜಿ ಫಾರಂಗಳಿಗೆ ಇದೇ ಬ್ಯಾಂಕಿನದ್ದು ಅಂತಾ ಬ್ಯಾಂಕಿನ ಮ್ಯಾನೇಜರ ಮತ್ತು ಫಿಲ್ಡ ಆಫೀಸರ ಸಹಿ ಮತ್ತು ಶಿಲ್ ಇರುತ್ತದೆ ಎಂದರೆ ಸರಿ. ಸರಬರಾಜು ಆದಂತಹ ಅರ್ಜಿ ಫಾರಂಗಳಿಗೆ ಇದೇ ಬ್ಯಾಂಕಿನದ್ದು ಅಂತಾ ಬ್ಯಾಂಕಿನ ಮ್ಯಾನೇಜರ ಮತ್ತು ಫಿಲ್ಡ ಆಫೀಸರ ಸಹಿ ಮತ್ತು ಶಿಲ್ ಇರುತ್ತದೆ ಅದರಿಂದ ಇದೇ ಬ್ಯಾಂಕಿನ ಅರ್ಜಿ ಫಾರಂಗಳು ಅಂತಾ ಗುರುತಿಸಲು ಆಗುತ್ತದೆ ಎಂದರೆ ಸರಿ. ಅರ್ಜಿಯ ಮೇಲೆ 1 ನೇ ಪ್ರತಿವಾದಿಯ ಫೋಟು ಲಗತ್ತಿಸಿ ಮ್ಯಾನೇಜರ ರವರ ಸಹಿ ಮತ್ತು ಶಿಲ್ ಕಡ್ಡಾಯ ಎಂದರೆ ಸರಿ. ಅದಕ್ಕೆ ಫಿಲ್ಡ್ ಆಫೀಸರ್ ಸಹ ಸಹಿ ಮಾಡುಬೇಕಾಗುತ್ತದೆ ಎಂದರೆ ಸರಿ.

1 ನೇ ಪ್ರತಿವಾದಿ ಚಾಲಕ ಅಂತಾ ಸಾಲ ಮಂಜೂರಾಗಿದ್ದು ಆತನ ಚಾಲನಾ ಪತ್ರವನ್ನು ಪಡೆದುಕೊಂಡಿರುತ್ತೇವೆ. 1 ನೇ ಪ್ರತಿವಾದಿ ಚಾಲನಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿಲ್ಲಾ. ದಿ: 18-09-2018 ರಂದು 1 ನೇ ಪ್ರತಿವಾದಿಯ A.O.D.ಮೇಲೆ ಸಹಿ ಮಾಡಿದ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ದಿ: 18-09-2018 ರಂದು 1 ನೇ ಪ್ರತಿವಾದಿಯನ್ನು ಕರೆಯಿಸಿ A.O.D.ಮೇಲೆ ಸಹಿ ಪಡೆದಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿ: 18-09-2018 ರಂದು 1 ನೇ ಪ್ರತಿವಾದಿ ನಮ್ಮ ಬ್ಯಾಂಕಿಗೆ ಬಂದಿಲ್ಲಾ, A.O.D.ಮೇಲೆ ಸಹಿ ಮಾಡಿಲ್ಲಾ ಎಂದರೆ ಸರಿಯಲ್ಲ. ಹೈಪೋಥಿಕೇಶನ ಅರ್ಜಿಯ ಮೇಲೆ 1 ನೇ ಪ್ರತಿವಾದಿ ಯಾವ ವಾಹನ ಪಡೆದಿದ್ದಾನೆ ಆ ವಾಹನ ಸಂಖ್ಯೆಯನ್ನು ನಮೂದು ಮಾಡುತ್ತೇವೆ ಎಂದರೆ ಸರಿ. ಹೈಪೋಥಿಕೇಶನ ಅರ್ಜಿಯ ಮೇಲೆ ಸಾಲದ ಮೊತ್ತ, ಎಷ್ಟು ಸಾಲದ ಕಂತು, ಪ್ರತಿ ತಿಂಗಳು ಎಷ್ಟು ಕಂತಿನ ಮೊತ್ತ ನಮೂದಿಸಬೇಕಾಗುತ್ತದೆ ಎಂದರೆ ಸರಿ. ಹೈಪೋಥಿಕೇಶನ ಅರ್ಜಿಯ ಮೇಲೆ ಸಾಲ ಪಡೆದ ವ್ಯಕ್ತಿಯ ಸಹಿ ಮತ್ತು ಜಾಮೀನದಾರ ಸಹಿ ಮತ್ತು ಬ್ಯಾಂಕಿನ ಮ್ಯಾನೇಜರ ಇವರ ಸಹಿ ಕಡ್ಡಾಯವಾಗಿ ಇರುತ್ತದೆ ಎಂದರೆ ಸರಿ.

1 ನೇ ಪ್ರತಿವಾದಿ ರೂ. 12842/- ಕಂತು ಇದ್ದು ಎಲ್ಲಿಯವರೆಗೆ ಪಾವತಿಸಿರುತ್ತಾರೆ ಎಂದು ನನೆಪಿಲ್ಲಾ. ನಂತರ 3 ತಿಂಗಳು ಕಟಬಾಕಿ ಆಗಿ ಎನ್. ಪಿ. ಎ. ಆಗುತ್ತದೆ ಎಂದು ನುಡಿಯತ್ತಾರೆ. 1 ನೇ ಪ್ರತಿವಾದಿಗೆ ಪಡೆದ ಸಾಲ ರೂ.5,70,000/- ರ ಪೈಕಿ ಎಷ್ಟು ಹಣ ಪಾವತಿಸಿದ್ದಾನೆ ಎಂದು ಗೊತ್ತಿಲ್ಲಾ ನಂತರ ವಾಹನ ಜಪ್ತಿ ಆಗಿ ಹರಾಜು ಆದ ನಂತರ ರೂ. ರೂ. 1,50,108/- ಭರಿಸಿಕೊಳ್ಳಲಾಗಿದೆ. 1 ನೇ ಪ್ರತಿವಾದಿಯ ಸಾಲದ ಅರ್ಜಿಯಲ್ಲಿ ಮತ್ತು ಹೈಪ್ರೋಥಿಕೇಶನ ದಾಖಲೆಯಲ್ಲಿ 60 ಕಂತಗಳು ರೂ. 12824/- ಅಂತಾ ಬರೆಯಲಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯಾವುದೇ ಸಾಲದ ಅರ್ಜಿ ಸಲ್ಲಿಸಿಲ್ಲಾ ಎಂದರೆ ಸರಿಯಲ್ಲ . 1 ಮತ್ತು ೨ ಪ್ರತಿವಾದಿ ಇಬ್ಬರ ಸಹಿಗಳನ್ನು ಸಾಲದ ಅರ್ಜಿಯಲ್ಲಿ ಮತ್ತು ಹೈಪ್ರೋಥಿಕೇಶನ ದಾಖಲೆಯಲ್ಲಿ ಅವರ ಸಹಿ ಪಡೆದು ಅವುಗಳ ಮೇಲೆ ನಮ್ಮ ಬ್ಯಾಂಕಿನ ಮ್ಯಾನೇಜರ ಮತ್ತು ಪೀಲ್ಡ್ ಆಫೀಸರ ಸಹಿ ಹಾಕಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಲದ ಅರ್ಜಿಯಲ್ಲಿ ಮತ್ತು ಹೈಪ್ರೋಥಿಕೇಶನ ದಾಖಲೆಯಲ್ಲಿ ರೂ. 12842/- ಕಂತು ಎಂದು ನಮೂದಿಸಿಲ್ಲಾ ಎಂದರೆ ಸರಿಯಲ್ಲ.

ನಿಪಿ-2 ಗ್ಯಾರಂಟಿ ಫಾರಂ. ನಿಪಿ-2 ರಲ್ಲಿ ಯಾವ ವಾಹನ ಮತ್ತು ಅದರ ನಂಬರ ನಮೂದಿಸುವ ಅಂಶ ಇಲ್ಲಾ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ಸಾಲ ಪಡೆದವ ಮತ್ತು ಜಾಮಿನುದಾರ ಸಹಿ ಮತ್ತು ಮ್ಯಾನೇಜರ್ ಸಹಿ ಇರುತ್ತದೆ ಎಂದರೆ ಸರಿ. ನಿಪಿ-5 ಕ್ಕೆ ನಮ್ಮ ಬ್ಯಾಂಕಿನ ಮ್ಯಾನೇಜರ ಸಹಿ ಮಾಡಿಲ್ಲಾ ಎಂದರೆ ಸರಿಯಲ್ಲ. ನಿಪಿ-5 ರಲ್ಲಿರುವ ರೆವಿನ್ಯೂ ಸ್ಟಾಂಪ ಕರ್ನಾಟಕದಲ್ಲಿ ನಿಷೇದಿಸಲಾಗಿದೆ ಎಂದರೆ ಸರಿಯಲ್ಲ. ರೆವಿನ್ಯೂ ಸ್ಟಾಂಪ ನಮ್ಮ ಕರ್ನಾಟಕದ ಯಾವುದೇ ಅಂಚೆ ಕಚೇರಿಯಲ್ಲಿ ಸಿಗುವುದಿಲ್ಲಾ ಎಂದರೆ ಸರಿಯಲ್ಲ . ನಿಪಿ-1 ರಿಂದ 5 ಗಳನ್ನು ಪೋರ್ಜರಿ ಮಾಡಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-1 ರಿಂದ 25 ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ . ನಿಪಿ-9 ನ್ನು ಆರ್. ಟಿ. ಓ. ಗುಲಬರ್ಗಾ ರವರಿಗೆ ಕಳುಹಿಸಲಾಗಿದೆ. ನಿಪಿ-9 ರ ಮೇಲೆ ನಮ್ಮ ಬ್ಯಾಂಕಿನ ಮ್ಯಾನೇಜರ ರವರ ಸಹಿ ಮತ್ತು ಶೀಲ್ ಹಾಕಬೇಕು ಎಂದರೆ ಸರಿ. ನಿಪಿ-9 ರಲ್ಲಿ ಶೀಲ್ ಮತ್ತು ಸಹಿ ಹಾಕಲಾಗಿದೆ ಎಂದರೆ ಸರಿ. ನಿಪಿ-9 ಕ್ಕೆ ನಮ್ಮ ಬ್ಯಾಂಕಿನ

ಮ್ಯಾನೇಜರ ರವರ ಸಹಿ ಮತ್ತು ಶೀಲ್ ಇಲ್ಲಾ ಮತ್ತು ಆರ್. ಟಿ. ಓ. ಗುಲಬರ್ಗಾರವರಿಗೆ ಪತ್ರ ಬರೆದಿಲ್ಲಾ ಎಂದರೆ ಸರಿಯಲ್ಲ. ನಿಪಿ-9 ನ್ನು ಸಂಬಂಧಪಟ್ಟ ವರಿಗೆ ಪಾರ್ಟಿಯ ಮುಖಾಂತರ ನಿಡುತ್ತೇವೆ.

ದಾವೆಯನ್ನು ನಮ್ಮ ಮುಖ್ಯ ಕಛೇರಿಯಿಂದ ಅನುಮತಿ ಪಡೆದು ಸಲ್ಲಿಸಬೇಕಾಗುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯಿಂದ ಯಾವುದೇ ರೂ. 6,17,791/- ದಾವಾ ಮೊತ್ತ ಬಾಕಿ ಇಲ್ಲಾ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ರೂ. 5,39,959,/- ಯಾವುದೇ ಬಾಕಿ ಇಲ್ಲಾ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಿಪಿ-6 ದಾಖಲೆ ಬರೆದುಕೊಟ್ಟಿಲ್ಲಾ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಿಪಿ-4 ಮತ್ತು 5 ಬರೆದುಕೊಟ್ಟಿಲ್ಲಾ ಎಂದರೆ ಸರಿಯಲ್ಲ. ನಿಪಿ-3 ರ ಮೇಲೆ ನಮ್ಮ ಬ್ಯಾಂಕಿನ ಮ್ಯಾನೇಜರ ಮತ್ತು ಸಾಲಗಾರ ಸಹಿ ಕಡ್ಡಾಯವಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಟಾಟಾ ಇಂಡಿಗೋ ನಾಲ್ಕು ಚಕ್ರ ವಾಹನದ ಮೇಲೆ ಸಾಲ ಪಡೆದಿರುತ್ತಾರೆ ನಿಪಿ-3 1 ನೇ ಪ್ರತಿವಾದಿ ಬರೆದುಕೊಟ್ಟಿಲ್ಲಾ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ವಾಹನದ ಬಗ್ಗೆ ತಿಳಿಸಿಲ್ಲಾ ಎಂದರೆ ಸರಿಯಲ್ಲ. ನಾನು ವಾದಿ ಬ್ಯಾಂಕಿನ ಮ್ಯಾನೇಜರ ಅಂತಾ ದಾಖಲೆ ಸಲ್ಲಿಸಿಲ್ಲಅ ಬೇಕಾದರೆ ಸಲ್ಲಿಸುತ್ತೇನೆ.

1 ನೇ ಪ್ರತಿವಾದಿ ಮೇಲೆ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಿ: 18-11-2018 ರಂದು ಕೆಎ.-32-ಸಿ-5361 ವಾಹನವನ್ನು ಹೈಪೋಥಿಕೇಶನ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿದ ದಾವೆ ಮತ್ತು ದಾಖಲೆ ಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ. ನನಗೆ ಸಾಕ್ಷಿ ನುಡಿಯುಲು ಯಾವುದೇ ಅಧಿಕಾರ ಇಲ್ಲಾ ಎಂದರೆ ಸರಿಯಲ್ಲ. ಸದರಿ ವಾಹನವನ್ನು ಗಣೇಶ ಏಜೆನ್ಸಿಯವರಿಗೆ ಪತ್ರ ಬರೆದು ವಾಹನವನ್ನು ಸೀಜ್ ಮಾಡಲಾಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹೈಪೋಥಿಕೇಶನ ಮೇಲೆ ಯಾವುದೇ ಸಾಲ ಪಡದಿಲ್ಲಾ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸಾಲ ಪಡೆದಿಲ್ಲಾ ಆದ್ದರಿಂದ ಯಾವುದೇ ಸಾಲ ಬಾಕಿ ಇಲ್ಲಾ ಎಂದರೆ ಸರಿಯಲ್ಲ. ಒಂದು ವೇಳೆ 6 ತಿಂಗಳು ವರೆಗೆ ಸಾಲ ಕಟ್ಟುತ್ತಿರಲಿಲ್ಲಾ ಎಂದರೆ ನಮ್ಮ ಬ್ಯಾಂಕಿನ ಮೂಲಕ ನೋಟಿಸ ನೀಡುತ್ತೇವೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಸಾಲ ಕಟ್ಟಿಲ್ಲಾ ಎಂದು ನೋಟಿಸ ನೀಡಿದ್ದೇವೆ. 1 ನೇ ಪ್ರತಿವಾದಿಗೆ ಸಾಲ ಕಟ್ಟಿಲ್ಲಾ ಎಂದು ಒಂದು ನೋಟಿಸ ನೀಡಿದ್ದೇವೆ. 1 ನೇ ಪ್ರತಿವಾದಿ ನಮ್ಮ ಬ್ಯಾಂಕಿನ ಬಂದಿಲ್ಲಾ, 2 ನೇ ಪ್ರತಿವಾದಿ ಗ್ಯಾರಂಟರ್ ಅಲ್ಲಾ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ರೂ. 5,70,000/- ಸಾಲ ಮಾಡಿ ಅದಕ್ಕೆ ಶೇ.14 ರಂತೆ ಬಡ್ಡಿ ಕಟ್ಟುತ್ತೇನೆ ಎಂದು ಅಗ್ರಿಮೆಂಟ್ ಬರೆದಕೊಟ್ಟಿದ್ದಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟಿ ಸವಾಲು: 2 ನೇ ಪ್ರತಿವಾದಿ ತಕರಾರು ಸಲ್ಲಿಸದೇ ಇರುವುದಿರಂದ ಪಾಟಿ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ : ಇಲ್ಲಾ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.